

ತಾಸ್ಮೇನಿಯಾ ಟೈಗರ್



ಹೊಂಬಣ್ಣದ ಮಂಡೂಕ



ಡೋಡೋ ಹಕ್ಕಿ

ಹಾರಿಬರುವ ಪಕ್ಷಿಗಳಿಗೆ ಈ ದೂರವು ಸವಾಲೇ ಅಲ್ಲ. ಆದರೆ ಡೋಡೋ ಎಂಬ ಹಕ್ಕಿಗೆ ಮಾರಿಷಸ್ ದ್ವೀಪ ಬಿಟ್ಟರೆ ತವರೇ ಬೇರೆ ಇಲ್ಲ. ಅದೇ ಸ್ವರ್ಗ, ಅದೇ ಜೈಲು. ಆದರ ಫೈಲ್ ಮುಗಿದಿತ್ತು. ಇದು ಹಕ್ಕಿ, ಆದರೆ ಹಾರಲಾಗದ ಸ್ಥಿತಿ. ಹಿಡಿಯಲು ಬಂದರೆ ಓಡುವ ತಾಕತ್ತೂ ಇರಲಿಲ್ಲ. ಇಲ್ಲಿಗೆ ನಾವಿಕರು ಬಂದರು. ಹಂದಿ, ಬೆಕ್ಕು, ಕೋತಿಗಳು ಬಂದವು. ಇವೆಲ್ಲಕ್ಕೂ ಭೋಜನವಾದದ್ದು ಡೋಡೋ ಹಕ್ಕಿ. 1681ರಲ್ಲಿ ಅವನ್ನು ಕೊನೆಯ ಬಾರಿಗೆ ಕಂಡ ಪೋರ್ಚುಗೀಸ್ ನಾವಿಕರು ರಕ್ಷಿಸಬಹುದಿತ್ತು, ಆದರೆ ಭಕ್ಷಿಸಲು ಗುಂಡಿಟ್ಟು ಕೊಂದರು. ಅಲ್ಲಿಗೆ ಮುಗಿಯಿತು ಡೋಡೋ ಸಂತತಿಯ ಕಥೆ.

ನೀವು ಪ್ಯಾಸೆಂಜರ್ ಪಿಜಿಯನ್ ಹೆಸರು ಕೇಳಿರಲಾರಿರಿ. ಮುದ್ದಾದ, ಬಂಗಾರದ ಬಣ್ಣದ ಕಾಡು ಪಾರಿವಾಳ. ಇಡೀ ರಾಕಿ ಪರ್ವತ ಶ್ರೇಣಿಯೇ ಅದರ ಸಾಮ್ರಾಜ್ಯ. ಮಿಸ್ಸಿಸಿಪ್ಪಿಯಿಂದ ಕೆನಡಾದವರೆಗೂ ಅದೆಷ್ಟೋ ಬಾರಿ ಹಾರಾಡಿದ್ದವು. ಆದರೆ ಮನುಷ್ಯನಿಗೆ ಅವುಗಳನ್ನು ಬಲಿಹಾಕುವುದೇನೂ ಕಷ್ಟವಾಗಲಿಲ್ಲ. ಅತ್ತ ಕಾಡುನಾಶ, ಆವಾಸಕ್ಕೆ ಪೆಟ್ಟು ಕೊಟ್ಟಿತು. ಇತ್ತ ಯೂರೋಪಿಯನ್ನರು ಆ ಕಡೆ ವಲಸೆ ಬಂದ ಮೇಲೆ ಅವರ ನಾಲಗೆ ಚಪಲಕ್ಕೆ ಇವು ಬಲಿಯಾದವು. ಯಾವ ರೆಸ್ಟೋರೆಂಟ್‌ಗೆ ಹೋದರೂ ಗಿರಾಕಿಗಳು ಈ ಹಕ್ಕಿಯನ್ನೇ ಊಟಕ್ಕೆ ಬಯಸುತ್ತಿದ್ದರು. 1890ರ ಹೊತ್ತಿಗೆ ಇದರ ಸಂತತಿ ಕ್ಷೀಣಿಸಿತು. 1914ರಲ್ಲಿ ಮೃಗಾಲಯದಲ್ಲಿ ಕೆಲವು ಪಕ್ಷಿಗಳನ್ನು ರಕ್ಷಿಸಲು ಮಾಡಿದ ಪ್ರಯತ್ನ ಫಲಕೊಡಲಿಲ್ಲ. ಅವು ತಮ್ಮ ಕಥೆಯನ್ನು ಹೇಳಿಕೊಳ್ಳದೆ ಕೊನೆಯುಸಿರೆಳೆದವು.

ಮನುಷ್ಯನ ಇತಿಹಾಸದಲ್ಲಿ ಇನ್ನೂ ಇಂಥ ಎಷ್ಟೋ ಪಾಪಕೃತ್ಯಗಳಿವೆ. ಮನುಷ್ಯ ಎಷ್ಟೋ ಸಂತತಿಗೆ ಎರವಾಗಿದ್ದಾನೆ. ಆದರೂ ಪಾಪಪ್ರಜ್ಞೆ ಕಾಡುವುದಿಲ್ಲ. ಇಂದಿಗೂ ಕದ್ದು ಮುಚ್ಚಿ ಕಾನೂನು ಬಾಹಿರವಾಗಿ ಹಕ್ಕಿಗಳನ್ನು ಕೊಲ್ಲಲಾಗುತ್ತಿದೆ. ಲೆಕ್ಕ ಸಿಕ್ಕುತ್ತಿಲ್ಲ ಅಷ್ಟೇ.



ಡೈನೋಸಾರ್‌ಗಳ ಸಾಮೂಹಿಕ ನಿರ್ಗಮನ

ಸಾವಿರ ವರ್ಷಗಳ ಹಿಂದೆ ನದಿ–ಕಣಿವೆಗಳಲ್ಲಿ ನೆಲೆಸಿದ, ಕೃಷಿ ಹಿಡಿದ, ಬೇಟೆಯ ಅವಲಂಬನೆ ಸ್ವಲ್ಪಮಟ್ಟಿಗೆ ನಿಂತಿತು. ಪಶು ಸಂಗೋಪನೆ ಮಾಡಿದ, ಮೊದಮೊದಲು ಹಸುವಿನ ಹಾಲು ಕುಡಿದ, ಜೀರ್ಣಿಸಿಕೊಳ್ಳದೆ ಒದ್ದಾಡಿದ. ಅನಂತರ ಹಾಲಿನ ಲ್ಯಾಕ್ಟೋಸನ್ನು ಕರಗಿಸಲು ಲ್ಯಾಕ್ಟೇಸ್ ಎಂಬ ಕಿಣ್ವ ಉತ್ಪಾದನೆ ಮಾಡಿಕೊಂಡ. ಹೈನುಗಾರಿಕೆಗೆ ವಿಶೇಷ ಪ್ರಾಶಸ್ತ್ಯ ಬಂತು. ಕಾಡುಪ್ರಾಣಿಗಳನ್ನು ಪಳಗಿಸಿದ. ಅವು ಇವನ ಗುಲಾಮರಾದವು. ಅವಕ್ಕೆ ಬಿಡುಗಡೆ ಇಲ್ಲ. ಮನುಷ್ಯನನ್ನು ಪ್ರಾಣಿವರ್ಗಕ್ಕೆ ಸೇರಿಸಿದರೂ ಬೇರೆಯದಕ್ಕಿಂತ ಈ ಪ್ರಾಣಿ ವಿಭಿನ್ನ. ಪ್ರಾಣಕ್ಕೆ ಸಂಚಕಾರ ಬಂದಾಗ, ಬೇರೆ ಪ್ರಾಣಿಗಳು ತಮ್ಮ ಉಳಿವಿಗಾಗಿ, ರಕ್ಷಣೆಗಾಗಿ ಹೋರಾಡುತ್ತವೆ. ಆದರೆ ಮನುಷ್ಯ ತನ್ನ ಸ್ವಾರ್ಥ, ಲಾಲಸೆಗಾಗಿ ಹೋರಾಡುತ್ತಾನೆ, ಬೇರೆ ಪ್ರಾಣಿಗಳಿಗಾದರೋ ಬೆದೆ ಕಾಲ ಎಂಬುದೊಂದಿದೆ. ಮನುಷ್ಯನಿಗೆ ಸರ್ವಋತುವೂ ಬೆದೆ ಕಾಲವೇ. ಸಮಯ, ಸಂದರ್ಭಗಳ ಹಂಗಿಲ್ಲ. ಈ ಕಾರಣಕ್ಕಾಗಿಯೇ ಈಗ ನಾವು ಧರೆಯಲ್ಲಿ 750 ಕೋಟಿ ಇದ್ದೇವೆ.

ಧರೆ ಎಂದಾಗ ನಾವು 'ಮಾತೆ' ಎನ್ನುತ್ತೇವೆ. ನೂರಾರು ವಿಶೇಷಣಗಳಿಂದ ಕರೆಯುತ್ತೇವೆ. ಆದರೆ ಎಂದೂ ಧರೆ ಹುಟ್ಟಿದ್ದು ಹೇಗೆ ಎಂಬುದರ ಬಗ್ಗೆ ತಲೆಬಿಸಿ ಮಾಡಿಕೊಳ್ಳುವುದಿಲ್ಲ. ಪ್ರತಿ ಚರಾಚರ ವಸ್ತುಗಳಿಗೂ ಹುಟ್ಟು–ಸಾವು ಎಂಬುದು ಇರುತ್ತದಲ್ಲ! ಭೂಮಿಯೂ ಹುಟ್ಟಿತ್ತು 460 ಕೋಟಿ ವರ್ಷಗಳ ಹಿಂದೆ, ಸೂರ್ಯ ವಂಶಸ್ಥೆ – ಅಯೋನಿಜೆ. ಯಾವ ಸುಮುಹೂರ್ತದಲ್ಲಿ ಭೂಮಿಯಲ್ಲಿ ಜೀವ ಮಿಡಿಯಿತೋ ಎಂದು ಕಂಡವರಿಲ್ಲ. ಆದರೆ ಒಂದಷ್ಟು ಪಳೆಯುಳಿಕೆಗಳನ್ನು ಸಾಕ್ಷಿಯಾಗಿ ತನ್ನ ಒಡಲಲ್ಲಿ ತುಂಬಿಕೊಂಡಿದೆ. ಭೂವಿಜ್ಞಾನಿಗಳು ಷೆರ್ಲಾಕ್ ಹೋಂ ಆಗಿ ಇವೆಲ್ಲವನ್ನೂ ಪತ್ತೆಹಚ್ಚಬೇಕು, ಜೋಡಿಸಬೇಕು. ಇದರ ಜೊತೆಗೆ ಟಿಕ್ ಟಿಕ್ ಎನ್ನದಿದ್ದರೂ ನಿಯಮಿತವಾಗಿ ವಿಕಿರಣ ಸೂಸುವ ಖನಿಜಗಳು ಕ್ಷಯಿಸುವ ಗತಿಯನ್ನು ಆಧರಿಸಿ ಭೂಮಿಯ ವಯಸ್ಸನ್ನು ಲೆಕ್ಕಹಾಕಬೇಕು. ಆ ಕೆಲಸವನ್ನು ಈಗಾಗಲೇ ಮಾಡಿದ್ದಾರೆ, ಲೆಕ್ಕ ಸಿಕ್ಕಿದೆ.

ಭೂಮಿ ಜೀವಿಗಳಿಗೆ ಸಹ್ಯ ಎನ್ನಿಸಬೇಕಾದರೆ ನೂರು ಕೋಟಿ ವರ್ಷಗಳು ಬೇಕಾದವು. ಆಕ್ಸಿಜನ್ ಬೇಕು, ನೀರು ಬೇಕು, ಬೆಳಕನ್ನು ಹೀರಿಕೊಳ್ಳಬೇಕು... ಒಂದೇ ಎರಡೇ... ಇಷ್ಟೆಲ್ಲ ಆದರೂ ಅದು ಯಾವ ನಿರ್ಜೀವ ರಾಸಾಯನಿಕ ಜೀವತಳೆದು ಪುಟಿಯಿತೋ